# ಮೆಸೇಜ್ ನಂಬಿ 18 ಲಕ್ಷ ರೂ.ಗೆ ನಾಮ

## ಮೊಬೈಲ್, ಇಂಟರ್ನೆಟ್ ಮೂಲಕ ಬಲೆ ಬೀಸುವ ಮೋಸಗಾರರು

▪ **ವಿರೂಪಾಕ್ಷ ಹೊಕ್ರಾಣಿ** ಬೆಂಗಳೂರು

ಮೊಬೈಲ್‌ಗೆ ಬಂದ ಮೆಸೇಜ್ ನಂಬಿ ನಗರದ ಪ್ರತಿಷ್ಠಿತ ಐಐಎಂ-ಬಿ ಪ್ರಾಧ್ಯಾಪಕ ರೊಬ್ಬರು 18 ಲಕ್ಷ ರೂ. ಕಳೆದುಕೊಂಡ ಘಟನೆಯಿದು.

ಮೊಬೈಲ್, ಇಂಟರ್ನೆಟ್ ಮೂಲಕ ಮೋಸ ಗಾರರು ಬೀಸುವ ಜಾಲಕ್ಕೆ ಜನಸಾಮಾನ್ಯರು ಮೋಸ ಹೋಗುವುದು ಸಾಮಾನ್ಯ. ಆದರೆ, ದೇಶದಲ್ಲೇ ಅತ್ಯುನ್ನತ ಶಿಕ್ಷಣ ನೀಡುವ ಐಐಎಂನ ಬೆಂಗಳೂರು ಕೇಂದ್ರದ ಪ್ರಾಧ್ಯಾಪಕರೊಬ್ಬರು, ಮೋಸಗಾರರ ಜಾಲಕ್ಕೆ ಬಲಿಯಾಗಿ 18 ಲಕ್ಷ ರೂ. ಕಳೆದುಕೊಂಡು ಇಂಗು ತಿಂದ ಮಂಗನಂತಾ ಗಿದ್ದಾರೆ.

ಕೆಲ ತಿಂಗಳ ಹಿಂದೆ ನಡೆದ ಘಟನೆಯಿದು. ಒಂದು ದಿನ ಪ್ರಾಧ್ಯಾಪಕರು ಐಐಎಂ-ಬಿಯಲ್ಲಿ ಪಾಠ ಮಾಡುತ್ತಿದ್ದಾಗ ಮೊಬೈಲ್‌ಗೆ ಸಂದೇಶ ವೊಂದು ಬಂತು. 'ಅಮೆರಿಕದಲ್ಲಿ ಕೋಕಾ ಕೋಲಾ ಕಂಪನಿಯಿಂದ ಡ್ರಾ ಮಾಡಲಾದ ಲಾಟರಿಯಲ್ಲಿ ನಿಮ್ಮ ಮೊಬೈಲ್ ನಂಬರ್ ಇದೆ. ನೀವು 5 ಬಿಲಿಯನ್ ಡಾಲರ್ ಹಣ ಗೆದ್ದಿದ್ದೀರಿ' ಎಂದು ಇತ್ತು. ಅಲ್ಲದೆ, ಕೆಳಗೊಂದು ಮೇಲ್ ಐಡಿ ಕೊಟ್ಟು ಸಂಪರ್ಕಿಸುವಂತೆ ಸೂಚಿಸಿತ್ತು. ಪಾಠ ಮಾಡುತ್ತಿದ್ದ ಪ್ರೊಫೆಸರ್‌ಗೆ ಕಣ್ಣ ಮುಂದೆ ಹಣದ ಹೊಳೆಯೇ ಹರಿದಂತಾ ಯಿತು.

ಜೀವನ ಪೂರ್ತಿ ಪಾಠ ಮಾಡಿದ್ದು ಸಾಕು. ಒಂದೇ ಬಾರಿ ಸೆಟ್ಲ್ ಆಗಿಬಿಡೋಣ ಎಂದು ನಿರ್ಧರಿಸಿ ಕೂಡಲೇ ಲ್ಯಾಪ್‌ಟಾಪ್ ತೆಗೆದರು. ವಂಚಕರ ಮೇಲ್‌ಗೆ ಸಂಪರ್ಕಿಸಿದರು. ಮೀನೊಂದು ಗಾಳಕ್ಕೆ ಬಿದ್ದ ಸುಳಿವು ಪಡೆದ ಮೋಸಗಾರರು ಎಚ್ಚರಿಕೆಯಿಂದ ಪ್ರಾಧ್ಯಾಪಕ ರನ್ನು ಡಾಲರ್‌ನಲ್ಲೇ ಅದ್ದಿ ಅದ್ದಿ ತೆಗೆದರು. ಕೋಕಾ ಕೋಲಾ ಕಂಪನಿ ಲಾಟರಿಯಲ್ಲಿ ನೀವು ಸೆಲೆಕ್ಟ್ ಆಗಿದ್ದೀರಿ, 5 ಬಿಲಿಯನ್ ಡಾಲರ್ ಹಣ ಬಂದಿದೆ. ಅದು ಬೇಕಾದರೆ ಸೇವಾ ಶುಲ್ಕ, ಇನ್ನಿತರೆ ಶುಲ್ಕಗಳಿಗೆ 10 ಲಕ್ಷ ರೂ.ಅನ್ನು ಇಂತಹ ಬ್ಯಾಂಕ್‌ನಲ್ಲಿ, ಇಂತಹ ಖಾತೆಗೆ ಜಮಾ ಮಾಡಿ ಎಂದು ಹೇಳಿದರು. ತಿಂಗಳಿಗೆ ಲಕ್ಷಗಟ್ಟಲೆ ಸಂಬಳ ಪಡೆಯುತ್ತಿದ್ದ ಪ್ರಾಧ್ಯಾ ಪಕರು ಹಿಂದು ಮುಂದು ನೋಡದೆ ಮೋಸಗಾರರ ಖಾತೆಗೆ 10 ಲಕ್ಷ ರೂ. ಜಮಾ ಮಾಡಿ ಬಂದರು.

ದೊಡ್ಡ ಕುರಿಯೊಂದು ಹಳ್ಳಕ್ಕೆ ಬಿದ್ದಿದ್ದನ್ನು ಕಂಡ ಸಂತೋಷ ಗೊಂಡಿದ್ದ ಮೋಸಗಾರರು, 10 ಲಕ್ಷ ರೂ. ಬ್ಯಾಂಕ್‌ನಿಂದ ಬಿಡಿಸಿ ಕೊಂಡಿದ್ದಾರೆ. ಅಲ್ಲದೆ, ಮತ್ತೆ ಮೇಲ್‌ಗೆ ಸಂಪರ್ಕಿಸಿ ನಿಮ್ಮ ಹಣ ಸಂದಾಯವಾಗಿದೆ. 5 ಬಿಲಿಯನ್ ಡಾಲರ್ ಈಗಾ ಗಲೇ ವಿಮಾನದ ಮೂಲಕ ದೆಹಲಿ ತಲುಪಿದೆ. ಕಸ್ಟಮ್ಸ್ ಕ್ಲಿಯರೆನ್ಸ್‌ಗೆ ಇನ್ನೂ 8 ಲಕ್ಷ ರೂ. ಅವಶ್ಯಕತೆ ಇದ್ದು, ಅದನ್ನು ಬೇಗ ಖಾತೆಗೆ ಜಮಾ ಮಾಡಿ ಎಂದಿದ್ದಾರೆ. ಕುಂತಲ್ಲೇ ಪುಟಿ ಯುತ್ತಿದ್ದ ಪ್ರಾಧ್ಯಾಪಕರು ಮತ್ತೆ ಅದೇ ಬ್ಯಾಂಕ್‌ಗೆ ಹೋಗಿ 8 ಲಕ್ಷ ರೂ. ಜಮಾ ಮಾಡಿದ್ದಾರೆ.

ಒಂದು ದಿನ ಬಿಟ್ಟು ಮತ್ತೆ ಮೇಲ್‌ಗೆ ಸಂಪರ್ಕಿಸಿದ ಮೋಸಗಾರರು ನಿಮ್ಮ ಹಣ ಮುಂಬೈನಲ್ಲಿ ಬಂದಿದ್ದು ತೆಗೆದುಕೊಂಡು ಹೋಗುವಂತೆ ಹೇಳಿದ್ದಾರೆ. ಆಗ ಪ್ರಾಧ್ಯಾಪಕರಿಗೆ ಮುಂಬೈನಿಂದ ಹೇಗೆ ಹಣ ತರುವುದು ಎಂಬ ಚಿಂತೆ ಕಾಡತೊಡಗಿತು. ಪುಣ್ಯಾತ್ಮರು ಹೇಗೂ ಅಮೆರಿಕದಿಂದ ಮುಂಬೈವರೆಗೂ ಹಣ ತಂದಿದ್ದಾರೆ. ಬೆಂಗಳೂರಿಗೆ ತಂದು ಕೊಡುವುದು ದೊಡ್ಡ ವಿಷಯವೇನೂ ಅಲ್ಲ ಎಂದ ಪ್ರಾಧ್ಯಾಪ ಕರು ಮತ್ತೆ ಮೇಲ್ ಮೂಲಕ 'ನಾನು ಬೆಂಗಳೂ ರಿನಲ್ಲಿ ಇರುವುದು ಹಣವನ್ನು ಬೆಂಗಳೂರಿಗೇ ತಂದು ಕೊಡಿ ಪ್ಲೀಸ್' ಎಂದು ಗೋಗರೆದಿದ್ದಾರೆ. ಅತ್ತ ವಂಚಕ ಜಾಲಕ್ಕೆ ತಡೆದುಕೊಳ್ಳಲಾಗದಷ್ಟು ಖುಷಿ. ಮುಂಬೈನಿಂದ ಕರ್ನಾಟಕಕ್ಕೆ ಹಣ ತರ ಬೇಕಾದರೆ ಅಂತಾರಾಜ್ಯ ಶುಲ್ಕ ಇರುತ್ತದೆ. ಮತ್ತೆ 8 ಲಕ್ಷ ರೂ. ಜಮಾ ಮಾಡಿ ಎಂದು ಹೇಳಿದ್ದಾರೆ.

ಆಗ ಪ್ರಾಧ್ಯಾಪಕರು ಕೊಂಚ ಗಲಿಬಿಲಿ ಗೊಂಡರು. ಹಾಕುತ್ತಿರುವ ಹಣವೆಲ್ಲಾ ಎಲ್ಲಿಗೆ ಹೋಗುತ್ತಿದೆ? ಎಂಬ ಅನುಮಾನ ಕಾಡತೊಡ ಗಿದೆ. ಈಗಾಗಲೇ 18 ಲಕ್ಷ ಧಾರೆ ಎರೆದರೂ ಮತ್ತೆ 8 ಲಕ್ಷ ರೂ. ಕೇಳುತ್ತಿದ್ದಾರೆ. ಕೊಡುವುದಾ? ಬೇಡವಾ? ಎಂಬ ಚಿಂತೆ ಬಿದ್ದಿದೆ. ಕೂಡಲೇ ಅವರು ಕರ್ನಾಟಕ ಬ್ಯಾಂಕಿಂಗ್ ಒಂಬುಡ್ಸ್ ಮನ್ ಅವರನ್ನು ಸಂಪರ್ಕಿಸಿದ್ದಾರೆ. ವಂಚನೆ ಅರಿತ ಒಂಬುಡ್ಸ್‌ಮನ್ 'ನೀವು ಮೋಸಗಾರರ ಜಾಲಕ್ಕೆ ಸಿಲುಕಿದ್ದೀರಿ. ಯಾವ ಲಾಟರಿಯೂ ಇಲ್ಲ, 5 ಬಿಲಿಯನ್ ಡಾಲರ್ ಹಣವೂ ಇಲ್ಲ' ಎಂದು ಹೇಳಿದಾಗ ಪ್ರಾಧ್ಯಾಪಕರಿಗೆ ಹೃದಯಾ ಘಾತ ಆಗುವುದೊಂದೇ ಬಾಕಿ. ನನ್ನ ಹೆಂಡತಿಗೆ ತಿಳಿಯದ ಹಾಗೆ ಹಣ ಕೂಡಿಟ್ಟಿದ್ದೆ, ಅದೆಲ್ಲವನ್ನೂ ಕಳೆದುಕೊಂಡೆನಲ್ಲ ಎಂದು ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಆದರೆ, ಕಾಲ ಮಿಂಚಿ ಹೋಗುತ್ತು. ಮೋಸ ಗಾರರು 18 ಲಕ್ಷ ರೂ. ಅನಾಯಾಸವಾಗಿ ಬಾಚಿ ಕೊಂಡುಬಿಟ್ಟಿದ್ದರು. ತದನಂತರ ಪ್ರಾಧ್ಯಾಪಕರು ಪೊಲೀಸರಿಗೆ ದೂರು ನೀಡಿದರು. ಆದರೆ, ಯಾವುದೇ ಪ್ರಯೋಜನ ಆಗಿಲ್ಲ.

### ಹೆಚ್ಚುತ್ತಿರುವ ವಂಚನೆ

**ಇತ್ತೀಚೆಗೆ ಮೊಬೈಲ್ ಮೆಸೇಜ್ ಕಳುಹಿಸಿ ಇಲ್ಲವೇ ಮೇಲ್‌ಗಳ ಮೂಲಕ ವಂಚಿಸುವವರ ಜಾಲ ಹೆಚ್ಚುತ್ತಿದೆ. ಕೋಕಾ ಕೋಲಾ, ಪೆಪ್ಸಿಕೋ ಲಾಟರಿಯಲ್ಲಿ ಗೆದ್ದಿದ್ದೀರಿ, ಸಾವಿರಾರು ಡಾಲರ್, ಇಲ್ಲವೇ ಕೋಟ್ಯಂತರ ರೂ. ಗೆದ್ದಿದ್ದೀರಿ. ಈ ಹಣ ನಿಮ್ಮ ಕೈ ಸೇರಬೇಕಾದರೆ ಇಂತಿಷ್ಟು ಹಣ ಜಮಾ ಮಾಡಿ ಎಂದು ಖಾಸಗಿ ಬ್ಯಾಂಕ್‌ಗಳ ಖಾತೆ ಸಂಖ್ಯೆ ನೀಡುತ್ತಾರೆ. ಇದನ್ನು ನಂಬಿ ಹಣ ಕಟ್ಟಿ ಮೋಸಹೋದವರೂ ಸಾಕಷ್ಟು ಜನ ಇದ್ದಾರೆ.**



**" ಜನಸಾಮಾನ್ಯರು ಯಾವುದೇ ವ್ಯಕ್ತಿಗಳನ್ನು ನೋಡದೆ, ಅವರ ಪರಿಚಯ ಇಲ್ಲದೆ ಅವರ ಖಾತೆಗೆ ಲಕ್ಷಾಂತರ ರೂಪಾಯಿ ಜಮಾ ಮಾಡಿ ಮೋಸಹೋಗುತ್ತಿ ದ್ದಾರೆ. ಮೊಬೈಲ್ ಅಥವಾ ಮೇಲ್‌ಗೆ ಬರುವ ಇಂತಹ ಆಮಿಷದ ಸಂದೇಶ ಗಳನ್ನು ನಂಬ ಬಾರದು. ನಕಲಿ ದಾಖಲೆ ಗಳನ್ನು ಸೃಷ್ಟಿಸಿ ಬ್ಯಾಂಕ್ ಖಾತೆ ಮಾಡಿಸುವುದ ರಿಂದ ವ್ಯಕ್ತಿಗಳನ್ನು ಪತ್ತೆಹಚ್ಚಲು ಕೆಲವೊಮ್ಮೆ ಸಾಧ್ಯವಾಗುವು ದಿಲ್ಲ. ಜನರು ಜಾಗೃತ ರಾಗದ ಹೊರತು ಇಂತಹ ಮೋಸಗಳು ನಡೆಯುತ್ತಲೇ ಇರುತ್ತವೆ.**

**- ಎಂ. ಪಳಿನಿಸಾಮಿ,**

**ಕರ್ನಾಟಕ ಬ್ಯಾಂಕಿಂಗ್ ಒಂಬುಡ್ಸ್‌ಮನ್**